

# ಭೀಮ ಬಿದಿರು



■ ಚಿತ್ರ ಬರಹ:
**ಕೆರೆಮನೆ ಭರತ್‌ರಾಜ್, ಶೃಂಗೇರಿ**

ಶೃಂಗೇರಿಯಿಂದ ಕೊಪ್ಪಕ್ಕೆ ಹೋಗಿ ಕೊಪ್ಪದಿಂದ ಜಯಪುರ ರಸ್ತೆಯಲ್ಲಿ ಬರುವ ಕಳಸಾಪುರ ಎಸ್ಟೇಟ್ ಗೆ ಹೋಗಿದ್ದೆ. ಡೆರಿಲ್ ಕುಲಾಸೊ ಅವರ ಎಸ್ಟೇಟನ್ನು 'ಮಲೆನಾಡಿನ ಲಾಲ್‌ಬಾಗ್' ಎಂದು ಕರೆದರೆ ತಪ್ಪಾಗಲಾರದು. ಇಲ್ಲಿ ಬ್ರಿಟಿಷರ ಕಾಲದಲ್ಲಿ ನೆಟ್ಟ ಗಿಡಗಳೂ ನೋಡಲು ಸಿಗುತ್ತವೆ. ತೋಟಕ್ಕೆ ಹೋದಾಗ ನಮಗೆ ಪುನರ್ಪುಳಿಯ ಜ್ಯೂಸ್ ರೆಡಿಯಾಗಿತ್ತು. ಜ್ಯೂಸ್ ಸೇವಿಸಿ 300 ಎಕರೆಯಷ್ಟಿದ್ದ ಎಸ್ಟೇಟಿನ ಅಪರೂಪದ ಹೊಸ ಹಣ್ಣಿನ ಗಿಡಗಳನ್ನು ತೋರಿಸಲು ತಮ್ಮ ಜೀಪಿನಲ್ಲಿ ನಮ್ಮನ್ನು ಕರೆದೊಯ್ದರು. ನಾನು ಎಷ್ಟೋ ಜಾತಿಯ ಹಣ್ಣಿನ ಗಿಡಗಳ ಹೆಸರನ್ನು ತಿಳಿದಿದ್ದೇ ಅವತ್ತು!

ಮಳೆಗಾಲದ ಸಮಯವಾದ್ದರಿಂದ ಆಕಾಶದಲ್ಲಿ ಮೋಡಗಳು ತುಂಬಿ–ಕೊಂಡಿದ್ದವು. ಎಲ್ಲ ಗಿಡಗಳನ್ನು ತೋರಿಸುತ್ತ ಮುಂದೆ ಹೋಗಿ ಎಸ್ಟೇಟಿನ ನೆತ್ತಿಯಲ್ಲಿರುವ ತಮ್ಮ ಬಂಗಲೆಯನ್ನೂ ತೋರಿಸಿದರು. ಅಲ್ಲಿಂದ ಹತ್ತಿರದ ಕಾಲುದಾರಿಯಲ್ಲಿ ಹೋಗುತ್ತಿದ್ದರೆ 10 ನಿಮಿಷದ ಬಳಿಕ ಕಾಲುದಾರಿಯಲ್ಲಿ ಭಯ ಹುಟ್ಟಿಸುವಂತಹ ಶಬ್ದ ಕೇಳತೊಡಗಿತು. ಎಲ್ಲರೂ ಒಂದು ಕ್ಷಣ ಮೌನ! ಒಮ್ಮೆಲೆ ಎಲ್ಲರೂ ತಲೆ ಎತ್ತಿ ನೋಡಿದರೆ ಅದು ಭೀಮ ಬಿದಿರು!

ಆಕಾಶಕ್ಕೆ ತಲೆ ಚಾಚಿ ನಿಂತಂತಹ ಆ ಬಿದಿರು ಮೆಳೆಯಲ್ಲಿ ತೆಂಗಿನ ಮರದ ಗಾತ್ರದ ಬಿದಿರುಗಳು! ತಣ್ಣನೆಯ ಗಾಳಿ ಬೀಸಿದಾಗ ಬಿದಿರಿನ ಮರ್ಮರ ಶಬ್ದ ಭಯ ಹುಟ್ಟಿಸುವಂತೆಯೇ ಇತ್ತು. ಹತ್ತಿರ ಹೋಗಿ ಸ್ಪರ್ಶಿಸಿದರೆ ಕಬ್ಬಿಣದಷ್ಟು ಗಟ್ಟಿಯಾದ ಬಿದಿರು. ಡೆರಿಲ್‌ರನ್ನೇ ಕೇಳಿದೆ; 'ಇದಕ್ಕೆ ಜಾಯಿಂಟ್ ಬರ್ಮಾ ಅಂತಾರೆ. ಇದಕ್ಕೆ 50–60 ವರ್ಷ ವಯಸ್ಸಾಗಿದೆ' ಎಂದರು. ಸುಮಾರು ಅರ್ಧ ಎಕರೆಯ ವಿಸ್ತೀರ್ಣದಲ್ಲಿ ಈ ಬಿದಿರಿನ ಮೆಳೆ ಇದೆ. ಅಂದಾಜು 150–200 ಬಿದಿರು ಕಂಬಗಳು, 80–90 ಅಡಿಯಷ್ಟು ಎತ್ತರಕ್ಕೆ ಚಾಚಿ ನಿಂತಿವೆ.

ಮೂಲತಃ ಬರ್ಮಾ ದೇಶದ ಈ ಬಿದಿರನ್ನು ಚಾರ್‌ಕೋಲ್‌ಗೆ ಬದಲಾಗಿ ಉಪಯೋಗಿಸುತ್ತಾರಂತೆ. ಈ ಬಿದಿರಿನ ಗಣ್ಣಿನಿಂದ ಗಣ್ಣಿಗೆ ಸುಮಾರಾಗಿ 1 ರಿಂದ ಒಂದೂವರೆ ಅಡಿಯಷ್ಟು ದೂರವಿದೆ. ಇದರ ಸುತ್ತಳತೆ 15–16 ಇಂಚು. ಕಡಿಯಲು ಸಾಧಾರಣ ಕತ್ತಿ ಅಥವಾ ಗರಗಸ ಸಾಕಾಗುವುದಿಲ್ಲ. ಚೈನಾ ಮಿಷನ್‌ಗಳೇ ಬೇಕು. ಫರ್ನಿಚರ್‌ಗಳ ತಯಾರಿಕೆಗೂ ಇದನ್ನು ಬಳಸಬಹುದು. ಸ್ಕೇಲ್ ಇಟ್ಟು ಗೆರೆ ಕೊರೆದ ಹಾಗೆ ನೇರಾನೇರ ಇರುವ ಈ ಬಿದಿರನ್ನು ನೋಡುವುದೇ ಒಂದು ಖುಷಿ.

